ಸಾಕ್ಷಿಗೆ ದಿನಾಂಕಃ **27.11.2024** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲು ಃಪ್ರತಿವಾದಿಯ ಪರಃ ಶ್ರೀ.ಎಸ್ ಕೆ ವಕೀಲರಿಂದ ಃ</u>

ನಿಡಿ-1 ರಲ್ಲಿ ತೋರಿಸಿರುವ ಹಕ್ಕು ಪತ್ರ ಸಂಃ 160/1983 ರ ದಾಖಲೆ ಪ್ರಕಾರ ನನ್ನ ಹೆಂಡತಿಗೆ ಹಕ್ಕು ಪತ್ರ ಪಡೆದುಕೊಂಡಿರುತ್ತೇವೆಂದರೆ ಸರಿ. ನಾನು ಹಾಜರುಪಡಿಸಿರುವ ಹಕ್ಕು ಪತ್ರ ನಿಪಿ-1 ರ ಸಂಃ 160/1983 ಆಗಿರುತ್ತದೆ ಎಂದರೆ ಸರಿ. ಒಂದೇ ಹಕ್ಕು ಪತ್ರದ ಸಂಖ್ಯೆ ಮೇಲೆ ಇಬ್ಬರಿಗೆ ಆಸ್ತಿ ನೀಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ಕಿಮ್ಮತ್ತು ಕಟ್ಟಿರುತ್ತೇವೆಂದು ನುಡಿಯುತ್ತಾರೆ. ನಿಪಿ-1 ನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ದಾವೆಯಲ್ಲಿ ತೋರಿಸಿರುವ ಚೆಕ್ಕುಬಂಧಿ ಸಹ ದಾವೆಗಾಗಿ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೊದಲಿಗೆ ಕರೀಂ ರವರು 30 ವರ್ಷಗಳಿಂದ ಸ್ವಾಧೀನ ಹೊಂದಿದ್ದು ನಂತರದಲ್ಲಿ ಇಸ್ಮಾಯಿಲ್ ರವರು ಪಡೆದುಕೊಂಡಿದ್ದು, ಸದರಿ ಇಸ್ಮಾಯಿಲ್ ಮೃತವಾದ ನಂತರ ಅವರ ಹೆಂಡತಿ ಜೈನಾಬು ರವರ ಹೆಸರಿಗೆ ಪೌತಿ ಖಾತೆಯಾಗಿದ್ದು, ನಂತರದಲ್ಲಿ ಪ್ರತಿವಾದಿ ಖರೀದಿ ಮಾಡಿದ್ದು ಆ ಆಧಾರದ ಮೇಲೆ ಇ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಮತ್ತೊಂದು ಹಕ್ಕುಪತ್ರ ಆಸ್ತಿಗೆ ಸಂಬಂಧಿಸಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ಮಾರಾಟ ಮಾಡಿರುತ್ತೇವೆಂದು ನುಡಿಯುತ್ತಾರೆ. ಒಬ್ಬ ವ್ಯಕ್ತಿಗೆ ಒಂದಕ್ಕಿಂತ ಜಾಸ್ತಿ ಹಕ್ಕುಪತ್ರ ನೀಡಲು ಕಾನೂನು ಇರುವುದಿಲ್ಲ ಎಂದರೆ ಸಾಕ್ಷಿಯು ಮೊದಲನೇ ಆಸ್ತಿ ಮಾರಾಟ ಮಾಡಿ ನಾವು ಟೌನ್ ಗೆ ಬಂದಿರುತ್ತೇವೆಂದು ನುಡಿಯುತ್ತಾರೆ. ನಿಪಿ-1 ಕ್ಕೆ ಪೂರಕವಾಗಿ ಸ್ಕೆಚ್ ಮತ್ತು ವಿತರಣಾ ವಹಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಯಾವುದೇ ಸ್ವಾಧೀನ ಹೊಂದಿಲ್ಲದಿದ್ದರೂ ದಾವೆ ದಾಖಲು ಮಾಡಲು ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರೂ, ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯಲು ಅರ್ಹರಿರುವುದಿಲ್ಲ, ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

O.S.No. 12/2022 PW1

ಃಮರುವಿಚಾರಣೆ ಇಲ್ಲಃ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ